# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

ಸಂ : ದೈ.ಶಿ.ವಿ./581/ಅಂ.ಕಾ.ಅಂ.ವ.ಮ.ಕ್ರೀ.ಕೂ./2016-2017

ದಿನಾಂಕ : 29ನೇ ಡಿಸೆಂಬರ್ 2016
E.mail-dir.deptofphyedn@gmail.com
Ph. No. 0821-2419288

*ಗೆ,*

ಪ್ರಾಂಶುಪಾಲರುಗಳು
ಮೈಸೂರು ವಿಶ್ವವಿದ್ಯಾನಿಲಯದ
ಸಂಯೋಜಿತ ಮತ್ತು ನಿಯೋಜಕ ಕಾಲೇಜುಗಳು

*ಮಾನ್ಯರೆ,*

*ವಿಷಯ* : 2016-2017ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಅಂತರ ವಲಯ ಮಹಿಳಾ ಕ್ರೀಡಾ ಕೂಟದ ಬಗ್ಗೆ.

* * * * *

ದಿನಾಂಕ 19 ರಿಂದ 21ನೇ ಫೆಬ್ರವರಿ 2017ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ ಮಹಿಳಾ ಕ್ರೀಡಾ ಕೂಟವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ಆಶ್ರಯದಲ್ಲಿ ನಡೆಸುತ್ತಿರುವುದಾಗಿ ತಿಳಿಸಲು ಹರ್ಷಿಸುತ್ತಾ, ದಿನಾಂಕ : 31-01-2017 ರಂದು ಪ್ರವೇಶ ಪತ್ರಗಳನ್ನು ಸ್ವೀಕರಿಸಲು ಕಡೆಯ ದಿನಾಂಕವಾಗಿರುತ್ತದೆ. ನಿಗದಿತ ಅವಧಿಯೊಳಗೆ ಲಗತ್ತಿಸಿರುವ ಪ್ರವೇಶ ಪತ್ರವನ್ನು ಕು॥ ಕೆ. ಜಯಶ್ರೀ, ದೈಹಿಕ ಶಿಕ್ಷಣ ನಿರ್ದೇಶಕರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ - 571 434 ಇವರಿಗೆ ಕಳುಹಿಸಬೇಕಾಗಿ ವಿನಂತಿ. ದಿನಾಂಕ : 04-02-2017 ರಂದು ಬೆಳಗ್ಗೆ 11-30ಕ್ಕೆ ನಿರ್ದೇಶಕರ ಕೊಠಡಿಯಲ್ಲಿ ತಳಕು ಪಟ್ಟಿಯನ್ನು ಹಾಕಲಾಗುವುದು.

ಹೊರಗಡೆಯಿಂದ ಬರುವ ತಂಡಗಳಿಗೆ ವಸತಿ ಸೌಕರ್ಯವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಇಲ್ಲಿ ದಿನಾಂಕ: 18-02-2017 ರ ಮಧ್ಯಾಹ್ನ 3-00 ಘಂಟೆಯ ನಂತರ ಠೇವಣಿ ಹಣ ರೂ. 500/- ಪಡೆದು ನೀಡಲಾಗುವುದು ಮತ್ತು ಸದರಿ ಹಣವನ್ನು ವಾಸ್ತವ್ಯದ ಸ್ಥಳದಲ್ಲಿ ಯಾವುದೇ ಹಾನಿ ಮಾಡದಿದ್ದಲ್ಲಿ, ವಸತಿಯನ್ನು ತೆರವುಗೊಳಿಸಿದ ನಂತರ ಹಿಂದಿರುಗಿಸಲಾಗುವುದು. ಈ ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ತಂಡಗಳ ವ್ಯವಸ್ಥಾಪಕರುಗಳ ಸಭೆಯನ್ನು ದಿನಾಂಕ : 18-02-2017ರಂದು ಸಂಜೆ 5-30 ಘಂಟೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಇಲ್ಲಿ ಕರೆಯಲಾಗಿದೆ. ಸ್ಪರ್ಧೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳ ಗುರುತಿನ ಪತ್ರಕ್ಕೆ ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ ನೀಡಿರುವ ನಮೂನೆಯಲ್ಲಿ ಕ್ರೀಡಾಪಟುವಿನ ಭಾವಚಿತ್ರದ ಮೇಲೆ ಪ್ರಾಂಶುಪಾಲರ ಮೇಲು ಸಹಿ ಮತ್ತು ಮೊಹರು ಇರುವ ಗುರುತಿನ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು ಹಾಗೂ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿರುವ ಎಲ್ಲಾ ತಂಡದ ಕ್ರೀಡಾಪಟುಗಳು ಕಾಲೇಜಿನ ಸಮವಸ್ತ್ರ ಮತ್ತು ಕಾಲೇಜಿನ ಧ್ವಜದೊಂದಿಗೆ ದಿನಾಂಕ : 19-02-2017 ರ ಬೆಳಗ್ಗೆ 8-30 ಘಂಟೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಇಲ್ಲಿ ಜರುಗಲಿರುವ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ನಿರ್ದೇಶನ ನೀಡಬೇಕಾಗಿ ವಿನಂತಿ.

ತಮ್ಮ ಕಾಲೇಜಿನ ತಂಡದ ವ್ಯವಸ್ಥಾಪಕರು ಮತ್ತು ಕ್ರೀಡಾಪಟುಗಳು ಮೇಲಿನ ಸೂಚನೆಗಳು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಕ್ರೀಡಾ ಕಾರ್ಯನೀತಿಯ ಕೈಪಿಡಿಯಲ್ಲಿ (Sports Policy Handbookನಲ್ಲಿ) ತಿಳಿಸಿರುವ ನಿಯಮಗಳನ್ನು ಪಾಲಿಸುವಂತೆ ತಿಳಿಸಬೇಕಾಗಿ ಕೋರುತ್ತಾ ಸದರಿ ಕ್ರೀಡಾಕೂಟವು ಯಶಸ್ವಿಯಾಗಿ ನಡೆಯಲು ತಮ್ಮ ಸಂಪೂರ್ಣ ಸಹಕಾರ ನೀಡಬೇಕಾಗಿ ವಿನಂತಿ.

**ವಿಶೇಷ ಸೂಚನೆ : ಬ್ಯಾಡ್‌ಮಿಂಟನ್ (ಷಟಲ್), ಹಾಕಿ, ಬ್ಯಾಸ್ಕೆಟ್‌ಬಾಲ್ ಮತ್ತು ಟೆನ್ನಿಸ್ ಕ್ರೀಡೆಗಳಲ್ಲಿ ವಲಯ ಮಟ್ಟದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿದ ತಂಡಗಳು ಮತ್ತು ಪ್ರವೇಶವನ್ನು ನೀಡಿದ ತಂಡಗಳು ದಿನಾಂಕ : 10-02 2017ರಂದು <u>ಬೆಳಗ್ಗೆ 8-30ಘಂಟೆಗೆ</u> ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ವರದಿ ಮಾಡಿಕೊಳ್ಳಬೇಕು. ಮೇಲ್ಕಂಡ ಕ್ರೀಡೆಗಳು ದಿನಾಂಕ : 10-02 2017 ಮತ್ತು 11-02-2017 ರಂದು ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ ನಡೆಯಲಿದೆ.**

ವಂದನೆಗಳೊಡನೆ,

ತಮ್ಮ ವಿಶ್ವಾಸಿ
29/12/2016
(ಡಾ. ಪಿ. ಕೃಷ್ಣಯ್ಯ)
ನಿರ್ದೇಶಕರು

ಪ್ರತಿಗಳನ್ನು ವಂದನಾಪೂರ್ವಕವಾಗಿ :

1. ಚಾಮುಂಡಿ/ಚಾಮರಾಜ/ಮಾಂಡವ್ಯ/ಮಲೆನಾಡು/ಕೃಷ್ಣರಾಜ ವಲಯಗಳ ಸಂಚಾಲಕರುಗಳು ತಮ್ಮ ವಲಯದ ವಿವಿಧ ಕ್ರೀಡೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿದ ವಲಯ ಮಟ್ಟದ ಪಂದ್ಯಾವಳಿಗಳ ಫಲಿತಾಂಶದ ಪಟ್ಟಿಯನ್ನು ನಿರ್ದೇಶಕರಿಗೆ ದಿನಾಂಕ : 31-01-2017 ರೊಳಗೆ ತಲುಪಿಸಲು ಕೋರಲಾಗಿದೆ. ಈ ಪತ್ರವನ್ನು ತಮ್ಮ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

## ಪ್ರವೇಶ ಪತ್ರ

ಗೆ,

**ಸಂಪರ್ಕದ ವಿವರ :**

ಕು॥ ಕೆ. ಜಯಶ್ರೀ — ಕಛೇರಿ ದೂರವಾಣಿ :
ದೈಹಿಕ ಶಿಕ್ಷಣ ನಿರ್ದೇಶಕರು — ಸಂಚಾರಿ : + 9880816027
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕ್ಯಾತನಹಳ್ಳಿ, ಪಾಂಡವಪುರ ತಾಲ್ಲೂಕು
ಮಂಡ್ಯ ಜಿಲ್ಲೆ.

ಮಾನ್ಯರೆ,

ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ ಮಹಿಳಾ ಕ್ರೀಡಾ ಕೂಟದಲ್ಲಿ ಈ ಕೆಳಗೆ ಟಿಕ್ ( ✔ ) ಮಾಡಿರುವ ಕ್ರೀಡೆಗಳಲ್ಲಿ ನಮ್ಮ ..........................................................ಕಾಲೇಜಿನ ತಂಡಗಳ ಪ್ರವೇಶವನ್ನು ಸ್ವೀಕರಿಸಬೇಕಾಗಿ ವಿನಂತಿ.

| ಕ್ರ.ಸಂ. | ಚಟುವಟಿಕೆ | | ಕ್ರ.ಸಂ. | ಚಟುವಟಿಕೆ | |
|---|---|---|---|---|---|
| 1. | ಬ್ಯಾಸ್ಕೆಟ್‌ಬಾಲ್ | | 6. | ಸಾಫ್ಟ್‌ಬಾಲ್ | |
| 2. | ಚೆಸ್ | | 7. | ಟೇಬಲ್ ಟೆನ್ನಿಸ್ | |
| 3. | ಹ್ಯಾಂಡ್‌ಬಾಲ್ | | 8. | ಟೆನ್ನಿಸ್ | |
| 4. | ಹಾಕಿ | | | | |
| 5. | ಖೋ-ಖೋ | | | | |

ದೈಹಿಕ ಶಿಕ್ಷಣ ನಿರ್ದೇಶಕರು/
ಕ್ರೀಡಾ ಕಾರ್ಯದರ್ಶಿ ಸಹಿ

ಪಾಂಶುಪಾಲರ ಸಹಿ
ಮತ್ತು ಕಾಲೇಜಿನ ಮೊಹರು

**ಸೂಚನೆ** : 1) ಪ್ರವೇಶ ಸ್ವೀಕರಿಸಲು 2016-2017ನೇ ಸಾಲಿನ ಪಂದ್ಯಾವಳಿಗಳಿಗೆ ಪ್ರವೇಶವನ್ನು ಪಾವತಿಸಿದ ಬಗ್ಗೆ ವಲಯ ಸಂಚಾಲಕರಿಂದ ಪಡೆದ ರಶೀತಿಯ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು.

2) **ಪ್ರವೇಶ ಸ್ವೀಕರಿಸಲು ಕಡೆಯ ದಿನಾಂಕ : 31-01-2017**

3) ಬ್ಯಾಡ್‌ಮಿಂಟನ್ (ಷಟಲ್), ಹಾಕಿ, ಬ್ಯಾಸ್ಕೆಟ್‌ಬಾಲ್, ಟೆನ್ನಿಸ್ ಮತ್ತು ಟೇಬಲ್ ಟೆನ್ನಿಸ್ ಕ್ರೀಡೆಗಳಲ್ಲಿ ವಲಯ ಮಟ್ಟದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿದ ತಂಡಗಳು ಮತ್ತು ಪ್ರವೇಶವನ್ನು ನೀಡಿದ ತಂಡಗಳು ದಿನಾಂಕ : 10-02 2017ರಂದು ಬೆಳಗ್ಗೆ 8-30ಘಂಟೆಗೆ ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ವರದಿ ಮಾಡಿಕೊಳ್ಳಬೇಕು. ಮೇಲ್ಕಂಡ ಕ್ರೀಡೆಗಳು ದಿನಾಂಕ : 10-02 2017 ಮತ್ತು 11-02-2017 ರಂದು ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ ನಡೆಯಲಿದೆ.